# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 218 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.03.2025 • ಸೋಮವಾರ • ಪುಟ:04 • ಬೆಲೆ:2
Volume:02 • Issue: 218 • PRGI No:KARKAN/2023/88055 • VIJAYANAGARA • 03.03.2025 • Monday • Page:04 • Rs:2

ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+
Digital E-PAPER READERS

No.1 HAMPI TIMES LEADING PRINT & DIGITAL District News Paper

Contact for Advertisements: 9448633038

# ಹಂಪಿ ಉತ್ಸವದಲ್ಲಿ ಕನ್ನಡಿಗರು ಖುಷ್

## ಕನ್ನಡ ಕಲಾವಿದರಿಗೆ ಆದ್ಯತೆ ನೀಡಿದ ಜಿಲ್ಲಾಡಳಿತ | ಹಂಪಿ ಉತ್ಸವ ಸಮಾರೋಪಕ್ಕೆ ಮೆರುಗು ತಂದ ಮೋಹಕತಾರೆ ರಮ್ಯ

## ಹಂಪಿ ವಿರೂಪಾಕ್ಷೇಶ್ವರನ ಆಶೀರ್ವಾದವೇ ಶ್ರೀರಕ್ಷೆ | ಮುಂದಿನ ವರ್ಷವೂ ಉತ್ಸವ ಅದ್ಧೂರಿ ಎಂದ ಶಾಸಕ ಎಚ್.ಆರ್.ಗವಿಯಪ್ಪ



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಸಮಾರೋಪ ಸಮಾರಂಭಕ್ಕೆ ಮೋಹಕ ತಾರೆ ರಮ್ಯ ಮೆರಗು ತಂದರು. ಹಂಪಿಯ ಗಾಯಿತ್ರಿ ಪೀಠದ ಬಳಿಯ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಭಾನುವಾರ ಜರುಗಿದ ಸಮಾರೋಪ ಸಮಾರಂಭದಲ್ಲಿ ರಮ್ಯ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿ, ಹಂಪಿ ಉತ್ಸವದಲ್ಲಿ ಮೊದಲ ಬಾರಿ ಭಾಗಿಯಾಗಿದ್ದೇನೆ. ಕನ್ನಡ ಕಲಾವಿದರಿಗೆ ಉತ್ಸವದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದ ಎಂದರು. ಆರಂಭದಲ್ಲಿ ಪುನೀತ್ ರಾಜಕುಮಾರ್ ನಟನೆಯ ಆಕಾಶ್ ಚಿತ್ರದ 'ನೀನೇ ನೀನೇ' ಹಾಡು ಹಾಡಿದರು. ಅಭಿಮಾನಿಗಳಿಗೆ ಊಟ ಆಯ್ತಾ? ಎಂದು ಪ್ರೀತಿಯಿಂದ ಕೇಳಿದರು. ವಿಕಲಚೇನ ಅಭಿಮಾನಿ ಚಿತ್ರಕಲಾವಿದ ರಾಜು ಜೊತೆ ಫೋಟೋ ಹಾಗೂ ಸೆಲ್ಫಿ ಕ್ಲಿಕ್ ಕೊಂಡರು. ನಂತರ ರಾಜು ಸಂಜು ವೆಡ್ಸ್ ಗೀತಾ ಚಿತ್ರ 'ಕಂಡಿಲ್ಲ ಯಾರು, ಆ ದೇವರನ್ನು' ಎಂಬ ಹಾಡು ರಮ್ಯ ಅವರಿಗಾಗಿ ವೇದಿಕೆ ಮೇಲೆ ಹಾಡಿದರು.

ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಂಪಿ ಉತ್ಸವ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಹಂಪಿಯ ಕ್ಷೇತ್ರದ ಎಲ್ಲಾ ದೇವತೆಗಳ ಆರ್ಶೀವಾದ ಇರುವರೆಗೂ ಜನರಿಗೆ ಶ್ರೀರಕ್ಷೆಯಿದೆ. ಮುಂದೆಯೂ ಹಂಪಿಯ ಉತ್ಸವೂ ವಿಜೃಂಭಣೆಯಿಂದ ನಡೆಯುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಸ್ತಾವಿಕವಾಗಿ ಮಾತನಾಡಿ, ವಿರೂಪಾಕ್ಷೇಶ್ವರ ಹಾಗೂ ಉದ್ಧಾನ ವೀರಭದ್ರೇಶ್ವರ ದೇವರ ಕೃಪೆಯಿಂದ ಹಂಪಿ ಉತ್ಸವಕ್ಕೆ ಜನಸಾಗರ ಹರಿದು ಬಂದಿದೆ. ವಿಜೃಂಭಣೆಯ ಹಂಪಿ ಉತ್ಸವ ಆಚರಣೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಸ್ತುವಾರಿ ಸಚಿವರಾದ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಸೂಕ್ತ ನಿರ್ದೇಶನ ನೀಡಿದರು. ಇದರೊಂದಿಗೆ ಪ್ರವಾಸೋದ್ಯಮ ಸಚಿವರಾದ ಹೆಚ್.ಕೆ.ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಿಗೆ ಅವರು ಸಹಕಾರ ನೀಡಿದ್ದಾರೆ. ಕಡ್ಡಿರಾಂಪುರ ಗ್ರಾಮದ ಪಾಣಿಸಾಯಿ, ಜಾನಕಮ್ಮ, ಜಯಂತಿ, ದಿವ್ಯ, ಅರ್ಜುನ್ ಸೇರಿದಂತೆ ಹಲವು ರೈತರು ಪಾರ್ಕಿಂಗ್‌ಗೆ ಜಮೀನು ನೀಡಿ ಸಹರಿಸಿದ್ದಾರೆ. ಇದರೊಂದಿಗೆ ಜಿಲ್ಲೆಯ ಎಲ್ಲಾ ಆಡಳಿತಾಧಿಕಾರಿಗಳ ಸಹ ಶ್ರಮಿಸಿದ್ದಾರೆ. ಹಂಪಿ ಸುತ್ತಮುತ್ತಲಿನ ಗ್ರಾಮದ ಜನರು ಸಹ ಸಹಕಾರ ನೀಡಿದ್ದಾರೆ ಎಂದು ಹೇಳಿ ಎಲ್ಲರಿಗೂ ಧನ್ಯವಾದ ಅರ್ಪಿಸಿದರು.

ಹುಡಾ ಅಧ್ಯಕ್ಷ ಹೆಚ್.ಎಂ.ಎಫ್.ನಿಯಾಜಿ, ಹಂಪಿ ಗ್ರಾ.ಪಂ.ಅಧ್ಯಕ್ಷೆ ರಜನಿಷಣ್ಮುಖಗೌಡ, ಜಿ.ಪಂ.ಸಿಇಎನ್.ಎಂ.ಅಲಿ ಅಕ್ರಮ್ ಷಾ, ಎಸ್ಪಿ ಶ್ರೀಹರಿ.ಬಿ.ಎಲ್, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಇತರರಿದ್ದರು.

# ನಡುರಾತ್ರಿವರೆಗೂ ಪ್ರೇಕ್ಷಕರನ್ನುಕುಣಿಸಿದ ಸಂಗೀತ ಮಾಂತ್ರಿಕ ಅರ್ಜುನ್ ಜನ್ಯ





## ಹಂಪಿ ಉತ್ಸವದ ಚಿತ್ರಾವಳಿ











## ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಶ್ರೀಕೃಷ್ಣದೇವರಾಯ ವೈಭವ ನೃತ್ಯ ರೂಪಕ

# ದೇವದಾಸಿಗೆ ರಾಣಿಪಟ್ಟ ಕರುಣಿಸಿದ ರಾಯ

## ಎಸ್. ಬಾಲರಾಜ್ ಪರಿಕಲ್ಪನೆ ಹಾಗೂ ನಿರ್ದೇಶನ | ನಟಿ, ರೂಪದರ್ಶಿ ರೂಪಾ ರವಿಚಂದ್ರ ನೃತ್ಯ ಸಂಯೋಜನೆ



ಚಿತ್ರಗಳು : ಕೆ.ಎಂ.ಕೊಟ್ರೇಶ್

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದಲ್ಲಿ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಭಾನುವಾರ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ಅರ್ಥ್ ಚಾರಿಟಬಲ್ ಟ್ರಸ್ಟ್‌ವತಿಯಿಂದ ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ದೊರೆ 'ಶ್ರೀಕೃಷ್ಣದೇವರಾಯ ವೈಭವ' ನೃತ್ಯ ರೂಪಕ ಪ್ರಸ್ತುತ ಪಡಿಸಿದರು.

ಅ.ನ.ಕೃ. ಅವರ ಕಾದಂಬರಿ 'ಶ್ರೀಕೃಷ್ಣದೇವರಾಯ' ಕೃತಿಯಿಂದ ಪ್ರೇರಣೆಗೊಂಡು ನೃತ್ಯ ರೂಪಕ ರಚಿಸಲಾಗಿದೆ. ಕೃಷ್ಣದೇವರಾಯ ಹಾಗೂ ಚೆನ್ನಾಂಭಿಕೆಯರ ನಡುವಿನ ಪ್ರೇಮ ಬಂಧನ, ಜೊತೆಗೆ ಆಡಳಿತ ಅವಧಿಯಲ್ಲಿ ಶ್ರೀಕೃಷ್ಣದೇವ ರಾಯ ದೇವದಾಸಿ ಪದ್ಧತಿ ಯನ್ನು ತೊಡೆದು ಹಾಕಲು ಕೈಗೊಂಡ ಕ್ರಮಗಳ ಬಗ್ಗೆ ನೃತ್ಯ ರೂಪಕ ಸಾರ್ವಜನಿಕರ ಮುಂದೆ ತೆರೆದಿಟ್ಟಿತು. 'ಸಮ ಸಮಾಜ ನಿರ್ಮಾಣಕ್ಕೆ ಮುಂದಾಗದ ಸಮಾಜವೊಂದು ಕ್ರೂರಿಗಳ ಕೂಟ' ಎಂದು ಭಾವಿಸಿದ ಕೃಷ್ಣದೇವರಾಯ ಮಾನವೀಯ ನೆಲಗಟ್ಟಿನಲ್ಲಿ ದೇವದಾಸಿ ಚೆನ್ನಾಂಬಿಕೆಯನ್ನು ವಿವಾಹವಾಗಿ ಮಹಾರಾಣಿ ಪಟ್ಟ ನೀಡಿದುದಾಗಿ ರೂಪಕದಲ್ಲಿ ತೋರಿಸಲಾಗಿದೆ. ಎಸ್. ಬಾಲರಾಜ್ ಪರಿಕಲ್ಪನೆ ಹಾಗೂ ನಿರ್ದೇಶನದಲ್ಲಿ ನೃತ್ಯ ರೂಪಕ ಮೂಡಿಬಂದಿದೆ. ನಟಿ ಹಾಗೂ ರೂಪದರ್ಶಿ ರೂಪಾ ರವಿಚಂದ್ರ ನೃತ್ಯ ಸಂಯೋಜನೆ ಮಾಡುವುದ ರೊಂದಿಗೆ ರೂಪಕದಲ್ಲಿ ನಟಿಸಿದ್ದಾರೆ.

# ಪುಟಾಣಿ ಮಕ್ಕಳಿಂದ ಹರ ಹರ ಶಂಭು ಶಾಸ್ತ್ರೀಯ ನೃತ್ಯ






ಹೊಸಪೇಟೆಯ ನಾಟ್ಯ ನಾದ ಕಲಾ ಸಂಘದ ವಿದ್ಯಾರ್ಥಿಗಳಾದ ರಿತಿಕಾ ತಿಪ್ಪೇಸ್ವಾಮಿ ಮತ್ತು ತಂಡದಿಂದ ಶನಿವಾರ ಶ್ರೀವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಪುಟಾಣಿ ಮಕ್ಕಳು ಶಾಸ್ತ್ರೀಯ ನೃತ್ಯ ಪ್ರದರ್ಶಿಸಿದರು. ನಾಟ್ಯಗುರುಗಳಾದ ಶಾಲಿನಿ ಹೆಬ್ಬಾರ್, ತಹಶೀಲ್ದಾರ್ ರಾಘವೇಂದ್ರರಾವ್, ನೇತ್ರಾವತಿ, ಬಿ.ಆರ್.ತಿಪ್ಪೇಸ್ವಾಮಿ, ಶಿಲ್ಪಾ ಇದ್ದರು.

## ಹಂಪಿ ಉತ್ಸವದ ಚಿತ್ರಾವಳಿ














## ನಿಮ್ಮ ಮಕ್ಕಳು ಅರಸರಾಗಬೇಕೆ?

ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ. ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?


ಇಂದು ಪಂಡಿತ ಪುಟ್ಟರಾಜ ಗವಾಯಿಗಳ ಜನ್ಮದಿನ

# ಸಾವಿರದ ಶರಣು... ಗಾನಯೋಗಿ ಗುರುವಿಗೆ



ಈ ಸನ್ಯಾಸಿಗಳಿಗೆ ಸಂಸಾರವಿಲ್ಲ, ಮಕ್ಕಳಿಲ್ಲ ಮರಿ ಇಲ್ಲ ಎಂಬುದು ಅವರನ್ನು ನೋಡಿದರೆ ಅನ್ನಿಸುತ್ತಿರಲಿಲ್ಲ. ಅವರ ಬಳಿ ಬಂದ ಎಲ್ಲ ಅನಾಥ ಅಂಧ ಮತ್ತು ಬಡ ಮಕ್ಕಳಿಗೆ ತಾಯಿಯ ಆಸರೆ ಅವರದು.ಸದಾ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ತುಡಿಯುತ್ತಾ ತಾವು ಸ್ವತಃ ಅಂಧರಾಗಿದ್ದು ಕೂಡ ಅಂಧ, ಅನಾಥ ಮಕ್ಕಳ ಕುರಿತು ಚಿಂತಿಸುತ್ತಾ ಅವರಲ್ಲಿ ಸಂಗೀತದ ಮೂಲಕ, ಶಿಕ್ಷಣದ ಮೂಲಕ ಶಕ್ತಿಯನ್ನು ತುಂಬುತ್ತಾ ಅನ್ನ, ಆಸರೆ ನೀಡಿದವರು ನಮ್ಮೆಲ್ಲರ ಪ್ರೀತಿಯ ಪುಟ್ಟಯ್ಯಜ್ಜನವರು.

ತಮ್ಮ ದೈಹಿಕ ನ್ಯೂನತೆಯಿಂದಾಗಿ ರಸ್ತೆ ಬದಿಯಲ್ಲಿ ರೈಲ್ವೆ ಸ್ಟೇಷನ್ ನಲ್ಲಿ, ವರ್ತುಲ ರಸ್ತೆಗಳಲ್ಲಿ, ಬೀದಿ ಬದಿಯಲ್ಲಿ ತಳ್ಳಲ್ಪಟ್ಟ ಸಾವಿರಾರು ಮಕ್ಕಳು ಇಂದು ತಮ್ಮದೇ ಕಾಲ ಮೇಲೆ ನಿಂತು ಜೀವನ ನಡೆಸುತ್ತಿದ್ದಾರೆ ಎಂದರೆ ಅದಕ್ಕೆ ಕಾರಣ ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳು. ಇಂದಿಗೂ ಉತ್ತರ ಕರ್ನಾಟಕದ ಬಡತನದ ಹಿನ್ನೆಲೆಯ ಮನೆಗಳ ಪಾಲಕರ ಕಟ್ಟಕಡೆಯ ಭರವಸೆಯಾಗಿ ಅಚಲವಾಗಿ ನಿಂತಿದ್ದವರು ಪುಟ್ಟರಾಜ ಗವಾಯಿಗಳು.

ಇಂದಿನ ಹಾವೇರಿ ತಾಲೂಕಿನ ದೇವಗಿರಿ ಗ್ರಾಮ ಪುಟ್ಟರಾಜ ಗವಾಯಿಗಳ ಹುಟ್ಟೂರು. ತಂದೆ ತಾಯಿಯರನ್ನು ಚಿಕ್ಕಂದಿನಲ್ಲೇ ಕಳೆದುಕೊಂಡು ಅನಾಥರಾದ ಪುಟ್ಟಯ್ಯನವರನ್ನು ಸೋದರ ಮಾವ ಚಂದ್ರಶೇಖರಯ್ಯನವರು ಪಂಚಾಕ್ಷರ ಗವಾಯಿಗಳಿಗೆ ಒಪ್ಪಿಸಿದರು. ತಮ್ಮಂತೆ ಅಂಧನಾದ ಪುಟ್ಟ ಮಗುವಿನ ಮೇಲೆ ವಿಶೇಷ ಮಮತೆ ಹೊಂದಿದ ಪಂಚಾಕ್ಷರ ಗವಾಯಿಗಳು ಮಗುವಿಗೆ ಅವಶ್ಯಕವಾದ ವಿದ್ಯಾಭ್ಯಾಸದ ಜೊತೆ ಜೊತೆಗೆ ಕರ್ನಾಟಕ ಮತ್ತು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿ ಕೊಡಿಸಿದರು. ಹಾರ್ಮೋನಿಯಂ, ಪಿಟೀಲು,ಸಾರಂಗ ಮತ್ತು ಶಹನಾಯಿ ವಾದನದಲ್ಲೂ ಪುಟ್ಟಯ್ಯನವರು ಪರಿಣತರಾದರು. ಅಂಧರಿಗೆ ವರದಾನವಾಗಿದ್ದ ಬ್ರೈಲ್ ಲಿಪಿಯಲ್ಲಿ ಪರಿಣತರಾಗಿದ್ದರು ಪುಟ್ಟರಾಜರು.

ಗುರುಗಳ ಪ್ರೀತಿ, ನಂಬಿಕೆ, ವಿಶ್ವಾಸ ಮತ್ತು ನಿಷ್ಠೆಯನ್ನು ಗಳಿಸಿಕೊಂಡ ಪುಟ್ಟಯ್ಯನವರು 1944 ರಲ್ಲಿ ವೀರೇಶ್ವರ ಪುಣ್ಯಾಶ್ರಮದ ಪೀಠಾಧಿಪತಿಯಾಗಿ ಕಾರ್ಯನಿರ್ವಹಿಸಲಾರಂಭಿಸಿದರು.

ದಿನದ ಎರಡು ಹೊತ್ತು ಇಷ್ಟಲಿಂಗ ಪೂಜಾ ನಿರತರಾಗುತ್ತಿದ್ದ ಪುಟ್ಟಯ್ಯನವರು ಮಕ್ಕಳಿಗೆ ಪ್ರತಿದಿನ ನಾಲ್ಕು ಗಂಟೆಯಷ್ಟು ಕಾಲ ಸಂಗೀತ ಪಾಠದ ರಿಯಾಜ್ ಜೊತೆಗೆ ಅವರ ಆಟ–ಪಾಠ, ಲಾಲನೆ–ಪಾಲನೆಯ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು.

ಪ್ರವಚನಗಳಲ್ಲಿ ಸಂಗೀತವನ್ನು ಮೇಳವಿಸಿ ಹಿಂದುಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ನುಡಿಸಬಲ್ಲ ಏಕಮೇವಾದ್ವಿತೀಯರಾದ ಪುಟ್ಟಯ್ಯಜ್ಜನವರು ಸಂಗೀತದ ಎಲ್ಲ ವಾದ್ಯಗಳನ್ನು ಏಕಕಾಲದಲ್ಲಿಯೇ ನುಡಿಸಿ ನೋಡುಗರಲ್ಲಿ, ಕೇಳುಗರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದರು. ಉಭಯ ಗಾಯನ ವಿಶಾರದ ಮತ್ತು ಸಕಲ ವಾದ್ಯ ಕಂಠೀರವ ಎಂಬ ಬಿರುದನ್ನು ಹೊಂದಿದ್ದರು. 35ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ ಪಂಡಿತ ಪುಟ್ಟರಾಜ ಗವಾಯಿಗಳು ತಮ್ಮ ಗುರುಗಳ ಹೆಸರಿನಲ್ಲಿ ಪಂಚಾಕ್ಷರವಾಣಿ ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿದ್ದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಪುಟ್ಟರಾಜ ಗವಾಯಿಗಳ ಇಷ್ಟ ಲಿಂಗ ಪೂಜಾ ವಿಧಾನ ಕುರಿತು ಜನಜನಿತವಾಗಿದ್ದ ವಿಷಯಗಳಿಂದ, ಸುದ್ದಿಗಳಿಂದ ಪ್ರೇರಿತರಾದ ವರ ನಟ ಡಾಕ್ಟರ್ ರಾಜಕುಮಾರ್ ಅವರು ಪುಟ್ಟಯ್ಯಜ್ಜನವರ ಪೂಜಾ ವಿಧಾನವನ್ನು ನೋಡಲು ಬಯಸಿದರು. ಆದರೆ ಇಷ್ಟ ಲಿಂಗ ದೀಕ್ಷೆ ಪಡೆದು ಲಿಂಗಧಾರಣೆ ಮಾಡಿಕೊಂಡವರಿಗೆ ಮಾತ್ರ ಪುಟ್ಟಯ್ಯಜ್ಜನವರ ಪೂಜಾ ವಿಧಾನವನ್ನು ನೋಡಲು ಸಾಧ್ಯ ಎಂಬ ಅರಿವಿನಿಂದ ತಾವು ಕೂಡ ಪುಟ್ಟಯ್ಯಜ್ಜನವರಿಂದ ಲಿಂಗ ದೀಕ್ಷೆ ಪಡೆದರು. ಸುಮಾರು ಮೂರು ತಿಂಗಳ ಕಾಲ ವೀರೇಶ್ವರ ಪುಣ್ಯಾಶ್ರಮದಲ್ಲಿ ವಾಸವಾಗಿದ್ದ ವರ ನಟ ಡಾ. ರಾಜ್ 'ಗಾನಯೋಗಿ ಪಂಡಿತ ಪಂಚಾಕ್ಷರ ಗವಾಯಿ' ಚಲನಚಿತ್ರಕ್ಕೆ ಸಾವಿರದ ಶರಣು ಗಾನಯೋಗಿ ಗುರುವೇ ಎಂಬ ಗೀತೆಯನ್ನು ಹಾಡಿ ಧನ್ಯತೆಯನ್ನು ಅನುಭವಿಸಿದರಲ್ಲದೇ, ಗಾನಯೋಗಿ ಗುರುಗಳ ಕೃಪಾಕಟಾಕ್ಷಕ್ಕೆ ಪಾತ್ರರಾದರು.

ಪುಟ್ಟರಾಜರು ತುಲಾಭಾರಗಳ ಚಕ್ರವರ್ತಿ. ರಾಜ್ಯ ಹಾಗು ಹೊರ ರಾಜ್ಯ ಮತ್ತು ಉತ್ತರ ಕರ್ನಾಟಕದ ಬಹುತೇಕ ಗ್ರಾಮಮಗಳ ಎಲ್ಲಾ ವರ್ಗದ ಭಕ್ತಸಮೂಹ ಒಟ್ಟು 2280ಕ್ಕೂ ಅಧಿಕ ತುಲಾಭಾರಗಳು ನಡೆದಿದ್ದು, ಆ ಮೂಲಕ ಬಂದ ಹಣವನೆಲ್ಲ ಅಂಧ, ಅನಾಥ, ಅಂಗವಿಕಲ ವಿದ್ಯಾರ್ಥಿಗಳ ವಸತಿ, ಊಟ ಮತ್ತಿತರ ಸೌಲಭ್ಯಕ್ಕಾಗಿ ವ್ಯಯಿಸಿರುವುದು ವಿಶೇಷ. ಮೂರ್ತಿ ಪೂಜೆ, ಅಡ್ಡ ಪಲ್ಲಕ್ಕಿ ಉತ್ಸವ, ತುಲಾಭಾರಗಳನ್ನು ವಿರೋಧಿಸುವ ಸೋಕಾಲ್ಡ್ ಬುದ್ಧಿಜೀವಿಗಳು ಕೂಡ ಪುಟ್ಟರಾಜರ ತುಲಾಭಾರವನ್ನು ಒಪ್ಪುತ್ತಿದ್ದದ್ದಕ್ಕೆ ಕಾರಣ ತುಲಾಭಾರದ ಹಿಂದಿರುವ ಘನ ಉದ್ದೇಶ ಎಂಬುದು ಸ್ಪಷ್ಟ. ಪುಟ್ಟರಾಜರಿಗೆ ಸಂದ ತುಲಾಭಾರಗಳು ಗಿನ್ನೆಸ್ ಪುಸ್ತಕ ಮತ್ತು ಲಿಮ್ಕಾ ಬುಕ್ ಆಫ್ ರೆಕಾರ್ಡ್ ನಲ್ಲಿ ದಾಖಲಾಗಿದೆ.

ಪುಟ್ಟರಾಜ ಗವಾಯಿಗಳ ಸಾಧನೆ ಹಾಗು ಸಲ್ಲಿಸಿದ ಸೇವೆಗಾಗಿ ಅವರಿಗೆ ಸಂದಿರುವ ಪುರಸ್ಕಾರಗಳು ಅನೇಕ.

1959ರಲ್ಲಿ ಸುತ್ತೂರು ಮಠದಿಂದ "ಸಾಹಿತ್ಯ ಸಂಗೀತ ಕಲಾಪ್ರವೀಣ" ಪ್ರಶಸ್ತಿ, 1965ರಲ್ಲಿ ಬನವಾಸಿ ವಿರಕ್ತ ಮಠದಿಂದ "ಸಮಾಜ ಸೇವಾ ಧುರೀಣ" ಪ್ರಶಸ್ತಿ, 1970ರಲ್ಲಿ ಶ್ರೀ ಮ.ನಿ.ಪ್ರ. ನೀಲಲೋಚನ ಸ್ವಾಮಿಗಳಿಂದ "ತ್ರಿಭಾಷಾ ಕವಿರತ್ನ ಪ್ರಶಸ್ತಿ" 1975ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರದಾನ, 1976 ರಲ್ಲಿ ಮೂರುಸಾವಿರ ಮಠ, ಹುಬ್ಬಳ್ಳಿ ಇವರಿಂದ "ಸಾಹಿತ್ಯ ಸಂಗೀತ ಕಲಾಚಕ್ರವರ್ತಿ" ಪ್ರಶಸ್ತಿ, 1981ರಲ್ಲಿ ಮುರುಘಾಮಠ,ಧಾರವಾಡ ಇವರಿಂದ "ಧರ್ಮಭೂಷಣ" ಪ್ರಶಸ್ತಿ, 1989ರಲ್ಲಿ ಶ್ರೀ ಶಾಂತಲಿಂಗೇಶ್ವರ ಸಂಸ್ಥಾನಮಠ, ಆಷ್ಟಗಿ ಇವರಿಂದ "ಕಲಾಜನಕ" ಪ್ರಶಸ್ತಿ.

ಇಡೀ ಜಗತ್ತಿನಲ್ಲಿ ಪುಟ್ಟರಾಜ ಗವಾಯಿಯರಂತಹ ಗುರುಗಳು ಇನ್ನೊಬ್ಬರಿಲ್ಲ. ತಮ್ಮ ಶಿಷ್ಯ ಕೋಟಿಯನ್ನು ಸಲಹಲು ಹಲವೆಡೆ ಸಂಗೀತ ಕಾರ್ಯಕ್ರಮಗಳನ್ನು ನೀಡಲು ಒಪ್ಪಿಕೊಳ್ಳುತ್ತಿದ್ದ ಪುಟ್ಟರಾಜ ಗವಾಯಿಗಳು ಎಂದೂ ವೈಭವೂಪೇತ ಕಾರಿನಲ್ಲಿ ಓಡಾಡಲಿಲ್ಲ... ಬದಲಾಗಿ ಸಂಗೀತ ಪರಿಕರಗಳನ್ನು ಜೊತೆಗಿಟ್ಟುಕೊಂಡು ತಮ್ಮ ಶಿಷ್ಯ ಕೋಟಿ ಯೊಂದಿಗೆ ಮೆಟಡೋರ್ ವಾಹನದಲ್ಲಿ ಯಾವುದೇ ಹಮ್ಮಿಲ್ಲದೆ ಪ್ರಯಾಣಿಸುತ್ತಿದ್ದರು.

ಸಂಗೀತದ ಕುರಿತು ಪುಟ್ಟರಾಜ ಗವಾಯಿಗಳ ಮಾತು ....ಸಂಗೀತ ಒಂದು ಹರಿಯುತ್ತಿರುವ ಹೊಳೆಯಂತೆ, ವಾಟಗ ಒಯ್ದವ ವಾಟಗ ತುಂಬಿಕೊಳ್ಳುತ್ತಾನೆ, ತಂಬಿಗಿ ಒಯ್ದವನು ತಂಬಿಗೆ ತುಂಬಿಕೊಳ್ಳುತ್ತಾನೆ ಕೊಡ ಒಯ್ದವನು ಕೊಡವನ್ನು ತುಂಬಿಕೊಳ್ಳುತ್ತಾನೆ ಅಂದರೆ ಯಾರ್ಯಾರು ಎಷ್ಟೆಷ್ಟು ಪರಿಶ್ರಮವನ್ನು ಹಾಕಿ ವಿದ್ಯೆಯನ್ನು ಕಲಿಯುತ್ತಾರೋ ಅಷ್ಟಷ್ಟು ಅವರಿಗೆ ಸಂಗೀತ ವಿದ್ಯೆ ಒಲಿಯುತ್ತದೆ ಎಂಬುದು ಅವರ ಅಂಬೋಣವಾಗಿತ್ತು.

ಹಲವಾರು ವರ್ಷಗಳ ಕಾಲ ಸಂಗೀತ ಪಾಠ, ನಾಟಕಗಳ ರಚನೆ, ಆಶ್ರಮದ ಮೇಲ್ವಿಚಾರಣೆ ನಿಭಾಯಿಸುತ್ತಾ ಪೀಠಾಧಿಕಾರಿಯಾಗಿದ್ದ ಪುಟ್ಟಯ್ಯಜ್ಜನವರು ತಮ್ಮ ಜೀವಿತದ ಕೊನೆಯ ಸಮಯದಲ್ಲಿ ಕಿಡ್ನಿ ವೈಫಲ್ಯದ ಕಾರಣದಿಂದ ಅನಾರೋಗ್ಯಕ್ಕೀಡಾಗಿ ಚಿಕಿತ್ಸೆ ಪಡೆದರಾದರೂ ವಯೋಸಹಜ ನಿಃಶಕ್ತಿಯ ಕಾರಣದಿಂದಾಗಿ ಮತ್ತು ಆಶ್ರಮದಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆಯಬೇಕೆಂಬ ಆಶಯದಿಂದ ಆಶ್ರಮಕ್ಕೆ ಮರಳಿದರು. ಮುಂದೆ ಸತತ ಐದು ದಿನಗಳ ಕಾಲ ಭಕ್ತರಿಗೆ ದರ್ಶನ ನೀಡುತ್ತಾ ಸೆಪ್ಟೆಂಬರ್ 17 2010 ರಂದು ಲಿಂಗೈಕ್ಯರಾದರು. ಉತ್ತರ ಕರ್ನಾಟಕದ ಮನೆ ಮನೆಯಲ್ಲಿ ಸೂತಕದ ಛಾಯೆ... ತಮ್ಮ ಮನೆಯ ಸದಸ್ಯನೇ ಎಂದೂ ಬಾರದ ಲೋಕಕ್ಕೆ ಹೋಗಿರುವನೇನೂ ಎಂಬಂತಹ ವಾತಾವರಣ. ಅಂತಿಮ ದರ್ಶನಕ್ಕೆ ರಾಜ್ಯದ ಹಲವೆಡೆಗಳಿಂದ ಲಕ್ಷಾಂತರ ಜನರ ಆಗಮನ. ಆಗಮಿಸಿದ ಸರ್ವರಿಗೂ ಗದುಗಿನ ಜನತೆ ಸ್ವಯಂಪ್ರೇರಿತರಾಗಿ ಆಹಾರ ನೀರು ಮತ್ತು ಸಾರಿಗೆಯ ವ್ಯವಸ್ಥೆಯನ್ನು ಮಾಡಿ ಅಂತಿಮ ದರ್ಶನಕ್ಕೆ ಅನುವು ಮಾಡಿಕೊಟ್ಟರು.

ಗದುಗಿನ ಮುಖ್ಯ ವೃತ್ತವೊಂದರಲ್ಲಿ ಪುಟ್ಟರಾಜ ಗವಾಯಿಗಳ ಬೃಹತ್ ಪ್ರತಿಮೆಯೊಂದನ್ನು ಸ್ಥಾಪಿಸಲಾಗಿದೆ. ಪುಟ್ಟರಾಜ ಗವಾಯಿಗಳ ಮೂಲ ಸ್ಥಳ ದೇವಗಿರಿಯಲ್ಲಿ ಪತ್ರಿ ಬನವನ್ನು ಸ್ಥಾಪಿಸಲಾಗಿದೆ. ಇಂದಿಗೂ ಉತ್ತರ ಕರ್ನಾಟಕದ ವಿಶೇಷವಾಗಿ ಗದುಗಿನ ಜನ ನಡೆದಾಡುವ ದೇವರು ಎಂದೆ ಹೆಸರಾದ ಪುಟ್ಟರಾಜ ಗವಾಯಿಗಳನ್ನು ಭಾವುಕತೆಯಿಂದ ಭಕ್ತಿಯಿಂದ ಸ್ಮರಿಸುತ್ತಾರೆ.

ಇಂಥವರ ಸಂತತಿ ಸಾವಿರ ಸಾವಿರವಾಗಲಿ... ಮತ್ತೆ ಗದುಗಿನ ಪುಣ್ಯಭೂಮಿಯಲ್ಲಿ ಪುಟ್ಟಯ್ಯಜ್ಜನವರು ಹುಟ್ಟಿ ಬರಲಿ.

# ಪೊಲೀಸ್ ಶ್ವಾನ ಚಾಣಾಕ್ಷ್ಯತನಕ್ಕೆ ಜನ ಫಿದಾ

## ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಪಡೆದ ಮುಧೋಳ್ ಶ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಕೊನೆ ದಿನವಾದ ಭಾನುವಾರ ಜಿಲ್ಲಾಡಳಿತ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಕಮಲಾಪುರದ ಹಂಪಿ ವಿಶ್ವ ಪಾರಂಪರಿಕ ತಾಣ ನಿರ್ವಹಣಾ ಪ್ರಾಧಿಕಾರದ (ಹವಾಮಾ) ಕಚೇರಿ ಹಿಂಭಾಗದಲ್ಲಿ ಹಮ್ಮಿಕೊಂಡಿದ್ದ ಶ್ವಾನಪ್ರದರ್ಶನವು ಜನಾಕರ್ಷಣೀಯವಾಗಿತ್ತು.

ಮೊದಲಿಗೆ ವಿಜಯನಗರ ಜಿಲ್ಲಾ ಪೊಲೀಸ್ ಶ್ವಾನದಳದ (ಲ್ಯಾಬ್ರಡರ್ ತಳಿಯ) ಕರ್ತವ್ಯದ ಕರಾಮತ್ತು ಪ್ರದರ್ಶಿಸಿದವು. ಅಪರಾಧ ಪ್ರಕರಣಗಳ ಪತ್ತೆ ಮತ್ತು ಬಾಂಬ್ ಪರಿಶೀಲನೆ ಕರ್ತವ್ಯ ನಿರ್ವಹಿಸಿದ ಇವುಗಳ ಚಾಣಾಕ್ಷತೆಯನ್ನು ಕಣ್ತುಂಬಿಕೊಂಡ ಜನರು ಜಾಣ್ಮೆಗೆ ಮಾರು ಹೋದರು. ತರಬೇತುದಾರರ ಆಜ್ಞೆಯಂತೆ ನಡೆಯುವ ಈ ಶ್ವಾನಗಳು ನಿಂತಲ್ಲೇ ನಿಲ್ಲುವುದು, ಕೂರುವುದು, ಓಡಾಡುವುದು ಕಂಡ ಜನರು ಆಶ್ಚರ್ಯ ಚಕಿತರಾದರು.

**21 ಜಾತಿಯ 65 ಶ್ವಾನಗಳು ಭಾಗಿ:**

ಈ ಬಾರಿಯ ಹಂಪಿ ಉತ್ಸವದಲ್ಲಿ 21 ವಿವಿಧ ಜಾತಿಯ ದೇಶಿ ಹಾಗೂ ವಿದೇಶಿ ತಳಿಗಳ 65 ಶ್ವಾನಗಳು ತಮ್ಮ ಮಾಲೀಕರೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಅದರಲ್ಲಿ 48 ಶ್ವಾನಗಳು 1 ವರ್ಷದೊಳಗಿನವು (ಅಡಲ್ಟ್ ವರ್ಗ), ಅದೇರೀತಿಯಾಗಿ 17 ಶ್ವಾನ 6 ತಿಂಗಳಿನವು (ಪಪ್ಪಿ ವರ್ಗ) ಇದ್ದವು.

**ವಿವಿಧ ಜಾತಿಗೆ ಸೇರಿದ ಶ್ವಾನ:**

ಅತಿ ಎತ್ತರ, ದೊಡ್ಡ ಹಾಗೂ ನೀಳ ಕಾಯದ ಗ್ರೇಟ್ ಡೆನ್, ಚಿಕ್ಕದಾದ ಸಿಟ್ಸ್ ಹಾಗೂ ಪಮೋರಿಯನ್, ಬೇಟೆಗೆ ಹೆಸರಾದ ಮುಧೋಳ, ಕುಟುಂಬಕ್ಕೆ ಪ್ರಿಯವಾದ ಗೋಲ್ಡನ್ ರಿಟ್ರೈವರ್, ಶೀತ ವಲಯದಲ್ಲಿ ಮಾನವ ಅತ್ಯಂತ ಉಪಯುಕ್ತ ಸಂಗಾತಿ ಎನಿಸಿದ ಸೈಬಿರಿಯನ್ ಹಸ್ಕಿ, ಯುದ್ಧಕ್ಕೆ ಹೆಸರುವಾಸಿಯಾದ ಜರ್ಮನ್ ಶಫರ್ಡ್, ಮಾಲೀಕನಿಗೆ ಅತ್ಯಂತ ನಿಷ್ಠೆಯಿಂದಿರುವ ಡಾಬರ್ ಮನ್, ಭಾರತದಲ್ಲಿ ಜನಪ್ರಿಯ ಹೊಂದಿರುವ ಲ್ಯಾಬ್ರಡಾರ್, ಅಮೇರಿಕಾದ ಬುಲ್ಲಿ, ಬೇಗಲೆ, ಡ್ಯಾಷ್‌ಹಂಡ್, ಪಗ್, ರೊಟ್‌ವೀಲರ್, ಬಾಕ್ಸರ್, ಪೊಮೆರೇನಿಯನ್, ಚೌ ಚೌ, ಶಿಹ್ ತ್ಸು ಬುಲ್ಲಿ, ಕೇನ್ ಕೊರ್ಸೊ, ಕಾಕರ್ ಸ್ಪೈನಿಯಲ್, ಕಾಕರ್, ಗ್ರೇಟ್ ಡೇನ್, ಟಾಯ್ ಪೋಮ್, ಬೆಲ್ಜಿಯನ್ ಮಾಲಿನೋಸಿಸ್ ಸೇರಿ ಅನೇಕ ತಳಿಗಳ ಶ್ವಾನಗಳು ಸ್ಪರ್ಧೆಯ ವಿಶೇಷ ಎನಿಸಿದವು.

ತಳಿಗಳವಾರು ಮೊದಲು ಸ್ಪರ್ಧೆ ನಡೆಸಿ ಶ್ವಾನಗಳನ್ನು ಆಯ್ಕೆ ಮಾಡಲಾಯಿತು. ತಳಿವಾರು ಪ್ರಥಮ ಸ್ಥಾನ ಪಡೆದ ಶ್ವಾನಗಳನ್ನು ಕೊನೆ ಹಂತ ಸ್ಪರ್ಧೆಗೆ ಆಯ್ಕೆ ಮಾಡಲಾಯಿತು. ಸ್ಪರ್ಧೆಯು ಸಹ ಅತ್ಯಂತ ತುರುಸಿನಿಂದ ಕೂಡಿತ್ತು.

**ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಪಡೆದ ಮುಧೋಳ್ ಶ್ವಾನ:**

ಹಂಪಿ ಉತ್ಸವ–2025ರ ಶ್ವಾನ ಪ್ರದರ್ಶನದಲ್ಲಿ ಗದಗದ ನೀಲಕಂಠ ಅವರ ಮುಧೋಳ್ ತಳಿಗೆ ಸೇರಿದ ಶ್ವಾನ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟ ಅಲಂಕರಿಸಿತು. ಪ್ರಥಮ ಸ್ಥಾನ ಪಡೆದ ಈ ಶ್ವಾನ ರೂ.10,000 ನಗದು ಪುರಸ್ಕಾರ ಮತ್ತು ಪದಕ ಪಡೆಯಿತು.



ಮರಿಯಮ್ಮನಹಳ್ಳಿಯ ಸತೀಶ್ ಚಿದ್ರಿಯವರ ಡಾಬರ್ ಮನ್ ಶ್ವಾನ ದ್ವಿತೀಯ ಸ್ಥಾನ ಪಡೆಯುವುದರೊಂದಿಗೆ ರೂ.7,500 ನಗದು ಬಹುಮಾನ ಹಾಗೂ ಪದಕಕ್ಕೆ ಪಾತ್ರವಾಯಿತು. ಇನ್ನೂ ಕೊಟ್ಟೂರಿನ ಕೆ.ಪಿ.ಶಿವಕುಮಾರ್ ಅವರ ಲ್ಯಾಬ್ರಡಾರ್ ಶ್ವಾನ ತೃತೀಯ ಸ್ಥಾನ ಪಡೆದು ರೂ. 5000 ನಗದು ಮತ್ತು ಪದಕ ತನ್ನದಾಗಿಸಿಕೊಂಡಿತು. ಶ್ವಾನ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ ಅವರು ಚಾಲನೆ ನೀಡಿದರು.

ಬೆಂಗಳೂರು ಪಶು ವೈದ್ಯಕೀಯ ಕಾಲೇಜಿನ ಪ್ರೊಫೆಸರ್ ಡಾ.ಬಸವರಾಜ್ ಬಾಳಣ್ಣನವರ್, ಹಾಸನ ಪಶು ವೈದ್ಯಕೀಯ ಕಾಲೇಜಿನ ಪ್ರೋಫೆಸರ್ ಡಾ.ಮಂಜುನಾಥ ಅವರು ಶ್ವಾನ ಪ್ರದರ್ಶನ ಸ್ಪರ್ಧೆಯ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು.

ಮೂಲ ಜಾತಿ ತಳಿ, ದೇಹದಾರ್ಢ್ಯತೆ, ಚುರುಕುತನ, ಚಾತುರ್ಯತೆ ಹಾಗೂ ಮಾಲೀಕರೊಂದಿಗೆ ಅವಿನಾಭಾವ ಸಂಬಂಧದ ಆಧಾರದ ಮೇಲೆ ವಿಜೇತ ಶ್ವಾನಗಳನ್ನು ಆಯ್ಕೆ ಮಾಡಲಾಯಿತು. ಭಾಗವಹಿಸಿದ ಎಲ್ಲಾ ಶ್ವಾನಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಈ ವೇಳೆ ಪಶುಸೇವೆ ಮತ್ತು ಪಶು ವೈದ್ಯಕೀಯ ಇಲಾಖೆಯ ಉಪನಿರ್ದೇಶಕ ಡಾ.ಪೋಮ್ ಸಿಂಗ್ ನಾಯ್ಕ್, ಸಹಾಯಕ ನಿರ್ದೇಶಕ ಡಾ.ಆಕ್ತರ್, ಇಲಾಖೆಯ ಇತರೆ ಅಧಿಕಾರಿಗಳಾದ ಡಾ.ಮಲ್ಲಿಕಾರ್ಜುನ, ಡಾ.ಯುಗಂಧರ್ ಮಾನ್ವಿ, ಡಾ.ಸಂತೋಷ್, ಡಾ.ಸತೀಶ್, ಚಿದಾನಂದಪ್ಪ.ಬಿ, ಇಲಾಖೆಯ ಸಿಬ್ಬಂದಿ ಮಂಗಳ ಗೌರಮ್ಮ, ಪದ್ಮಜ, ಶೋಭಾ, ವಿಜಯ ಲಕ್ಷ್ಮೀ, ಶಾಂತಕುಮಾರಿ, ಚಂದನಾ ಸೇರಿದಂತೆ ಸಾರ್ವಜನಿಕರು ಹಾಗೂ ಇತರರು ಇದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038


### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಕಷ್ಟವಿದ್ದಾಗ ಹುಟ್ಟುವ ಕವಿತೆಗಿದೆ ತಾಕತ್ತು

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಕವಿತೆಗಳು ಶೋಷಿತರ ಧ್ವನಿಯಾಗಲಿ ಎಂದ ವೆಂಕಟಗಿರಿ ದಳವಾಯಿ




**ಹಂಪಿ ಟೈಮ್ಸ್ ಹೊಸಪೇಟೆ**

ಕವಿತೆ ಶೋಷಿತರ ನೋವು, ನಲಿವುಗಳ ಪರ ನಿಲ್ಲುವಂತಿರಬೇಕು. ಕವಿ ಅವರ ಧ್ವನಿಯಾಗಬೇಕು. ಇಂದಿನ ಕವಿಗಳು ಚಾರಿತ್ರಿಕವಾಗಿ ಶೋಷಿತರಿಗೆ ಉಂಟಾದ ಅನ್ಯಾಯ ಪ್ರಶ್ನಿಸಿ, ಕವಿತೆಗಳ ಮೂಲಕ ಈ ಅನ್ಯಾಯವನ್ನು ಸರಿ ಮಾಡುವ ಮಾರ್ಗಗಳನ್ನು ಹುಡುಕುವ ಕೆಲಸ ಮಾಡಬೇಕು ಎಂದು ಕವಿ ಹಾಗೂ ವಿಮರ್ಶಕ ಕನ್ನಡ ಹಂಪಿ ವಿಶ್ವವಿದ್ಯಾಲಯದ ಡಾ. ವೆಂಕಟಗಿರಿ ದಳವಾಯಿ ಯುವಕವಿಗಳಿಗೆ ಸಲಹೆ ನೀಡಿದರು.

ಭಾನುವಾರ ಹಂಪಿ ಉತ್ಸವ– 2025 ರ ಅಂಗವಾಗಿ ಶ್ರೀ ವಿರೂಪಾಕ್ಷೇಶ್ವರ ದೇವಾಲಯ ವೇದಿಕೆಯಲ್ಲಿ ಹಮ್ಮಿಕೊಂಡಿದ್ದ 3ನೇ ದಿನದ ಯುವ ಕವಿಗೋಷ್ಠಿ ಕಾರ್ಯಕ್ರಮವನ್ನು ಸ್ವರಚಿತ ಬುಡಕಟ್ಟು ಮಹಿಳೆ ಕಾವ್ಯ ಓದುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಕವಿಯ ವಿಚಾರಧಾರೆ ಎಂದಿಗೂ ಪೂರ್ಣಗೊಳ್ಳುವುದಿಲ್ಲ. ನಿತ್ಯವು ಹೊಸತನವನ್ನು ಕವಿ ಹುಡುಕುತ್ತಿರಬೇಕು. ಅಂತಃದೃಷ್ಟಿ ಕಾಪಾಡಿಕೊಳ್ಳಬೇಕು. ಇನ್ನೊಬ್ಬರನ್ನು ದೂರುವ ಮುನ್ನ ಮೊದಲು ನಮ್ಮನ್ನು ನಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕು, ಅಂದಾಗಲೇ ನಮ್ಮ ಕವಿತೆಗೆ ಸಾರ್ವತ್ರಿಕತೆ ದೊರಕಿ ಬಹಳ ದಿನ ಉಳಿಯುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಎಂ. ಎಸ್. ದಿವಾಕರ ಮಾತನಾಡಿ, ಕವಿತೆ ಶ್ರೀಮಂತಿಕೆ ಜೀವನ ಸಿರಿವಂತಿಕೆಯಲ್ಲಿದ್ದಾಗ ಹುಟ್ಟುವದಿಲ್ಲ. ಅದು ಕಷ್ಟ ಇದ್ದಾಗ ಜನ್ಮತಾಳುತ್ತದೆ. ಯುವ ಕವಿತೆಗಳಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಹಂಪಿ ಉತ್ಸವದಲ್ಲಿ ಯುವ ಕವಿಗೋಷ್ಠಿಯನ್ನು ಆಯೋಜನೆ ಮಾಡಲಾಗಿದೆ. ಉತ್ಸವಕ್ಕೆ ಆಗಮಿಸಿದ ಲಕ್ಷಾಂತರ ಜನರನ್ನು ಚಿಂತನೆ ಹಚ್ಚುವ, ಅವರಲ್ಲಿ ಬದಲಾವಣೆ ತರುವ ಶಕ್ತಿ ಕವಿತೆಗಿದೆ. ಯುವ ಕವಿಗಳು ಈ ನಿಟ್ಟಿನಲ್ಲಿ ಕವಿತೆಗಳನ್ನು ರಚಿಸಬೇಕು ಎಂದು ಹೇಳಿದರು.

ಸಾಮಾಜಿಕ ಚಿಂತಕ ಮಧುರಚನ್ನಶಾಸ್ತ್ರಿ ಮಾತನಾಡಿ, ಹಂಪಿ ಉತ್ಸವದ ಕವಿಗೋಷ್ಠಿಗೆ ಹೆಸರು ಕೊಟ್ಟ ಎಲ್ಲಾ ಕವಿಗಳನ್ನು ಕವಿತೆ ವಾಚನಕ್ಕೆ ಆಯ್ಕೆ ಮಾಡಲಾಗಿದೆ. ಕರ್ನಾಟಕದ ಸಾಹಿತ್ಯದಲ್ಲಿ ವಚನ ಸಾಹಿತ್ಯಕ್ಕೆ ದೊಡ್ಡ ಸ್ಥಾನ ಇದೆ. 12 ಶತಮಾನದಿಂದ ಶರಣರು ತಮ್ಮ ಕಾಯಕ ಹಾಗೂ ವಚನಗಳ ಮೂಲಕ ಜಗತ್ತಿಗೆ ಒಳ್ಳೆಯ ಸಂದೇಶ ನೀಡಿದರು. ಅಂದಿನ ವಚನಗಳು ಇಂದಿಗೂ ಬಹಳ ಪ್ರಸ್ತುತವಾಗಿವೆ ಎಂದರು.



ಕವಿ ಡಾ. ಅಕ್ಕಿ ಬಸವೇಶ ಆಶಯ ನುಡಿಗಳನ್ನಾಡಿದರು. ಬಳ್ಳಾರಿ ವಿಶ್ವವಿದ್ಯಾಲಯದ ಡೀನ್ ಡಾ. ಮಂಜುನಾಥ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು. ಸಾಮಾಜಿಕ ಚಿಂತಕ ಬಾಣದ ಮುರಳೀಧರ. ಶಾಲಾ– ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ವೆಂಕಟೇಶ್ ರಾಮಚಂದ್ರಪ್ಪ, ಡಾ. ದಯಾನಂದ ಕಿನ್ನಾಳ. ಕವಿಗಳಾದ ಅಬ್ದುಲ್ ಹೈದರ್ ಸೇರಿದಂತೆ ಇತರೆ ಹಲವಾರು ಯುವ ಕವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಬಳ್ಳಾರಿ ಬಾಣಂತಿಯರ ಸಾವಿಗೆ ಸ್ಪಂದನೆ :**

ಹಂಪಿ ಉತ್ಸವದಲ್ಲಿ ಯುವಕವಿ ಡಾ.ರವಿಚಂದ್ರ 'ಹೆಸರಿಲ್ಲದ ಅನಾಥ' ಎಂಬ ಶೀರ್ಷಿಕೆಯ ಕವಿತೆಯಲ್ಲಿ ಬಳ್ಳಾರಿ ವಿಮ್ಸ್ ಆಸ್ಪತ್ರೆಯಲ್ಲಿ ಸಂಭವಿಸಿದ ಸರಣಿ ಬಾಣಂತಿಯರ ಸಾವಿಗೆ ಸ್ಪಂದನೆ ತೋರಿದರು. 'ಜೀವ ಉಳಿಸುವ ಔಷಧಗಳೇ ವಿಷವಾಗಿ ಬದಲಾಗಿವೆ ಇಂದು' ಎನ್ನುವ ಮೂಲಕ ಬೇಸರ ವ್ಯಕ್ತಪಡಿಸಿದರು. ಅನಾಥ ಮಗುವೊಂದು ಏಕಲವ್ಯನಂಥೆ ಶಿಲ್ಪಕಲೆಯ ಪ್ರಾವಿಣ್ಯ ಪಡೆದು, ನಾಡಿನ ಹೆಸರಾಂತ ದೇವಸ್ಥಾನಗಳ ವಿಗ್ರಹ, ಮಸೀದಿಗಳಲ್ಲಿ ಕಲ್ಲಿನ ಚಿತ್ತಾರ, ಚರ್ಚಗಳಲ್ಲಿ ಕಲಾಕೃತಿಗಳನ್ನು ಕೆತ್ತಿ ಸಾಧನೆ ತೋರಿದನ್ನು ಬಿಂಬಿಸಿತು.

**ಎಡ ಚಿಂತಕರ ಲೇವಡಿ:**

ಯುವ ಕವಿಯತ್ರಿ ಹೆಚ್.ಡಿ.ತೇಜವತಿ ವಾಚಿಸಿದ 'ಪರಮಾತ್ಮನ ನುಡಿ' ಕವಿತೆ ಎಡ ಚಿಂತಕರ ದಂದ್ವ ನಿಲುವು ಪ್ರಶ್ನಿಸಿ, ನಡೆ ನುಡಿಯಲ್ಲಿನ ಬೂಟಾಟಿಕೆ ಎತ್ತಿ ತೋರಿಸಿತು. ಎಡ ಚಿಂತಕರನ್ನು ನಕ್ಷತ್ರಿಕರ ದಂಡು ಎನ್ನುವ ಲೇವಡಿ ಮಾಡಿತು. ಶೋಷಿತರ ಸೋಗಿನಲ್ಲಿರುವ ಹಡೆ ಮುದಿರಿಕೊಂಡು ನಟಿಸುತ್ತಿರುವ ಘಟ ಸರ್ಪಗಳು ಎಂದು ಟೀಕಿಸಿತು.

**ಹೆಣ್ಣಿನ ತಲ್ಲಣ ತೆರೆದಿಟ್ಟ ಫರ್ವಿನ್ ಬೇಗಂ:**

ಕನಕಗಿರಿ ಪಟ್ಟಣ ಫರ್ವಿನ್ ಬೇಗಂ ರಚಿಸಿದ ಕವನ ಮದುವೆಯಾಗಿ ಸಂಸಾರ ತೂಗಿಸುತ್ತಿರುವ ಹೆಣ್ಣಿನ ತಲ್ಲಣವನ್ನು ಸಹೃದಯಿಗಳ ಮುಂದೆ ತೆರದಿಟ್ಟಿತು. ಗಂಡನ ಮುಂದೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಚಡಪಡಿಸುವ ಹೆಣ್ಣಿನ ಸ್ವಗತ ಕವನದಲ್ಲಿ ಮೂಡಿಬಂದಿದೆ. ನಿತ್ಯವು ಮದ್ಯದಮಲಿನಲಿ ಬಂದು ಮೇಲೆರಗುವ ಗಂಡನ ಸಹಿಸಿ, ತಣಿಸಿ ಅವಳ ದೇಹದ ಗರ್ಭವೇ ಗಾಯವಾಗಿದೆ. ಗಂಡನ ಗಂಡಸ್ತನದ ಹೂಂಕಾರಕೆ ಹೆಂಡತಿಯ ಶೋಕ ಕೇಳದಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಕೋಮಲ ಮನಸ್ಸು ಸಂಕಟದಲ್ಲಿ ಜೀವನ ಸಾಗಿಸುತ್ತಿದೆ. ಬದಲಾವಣೆ ಹಾಗೂ ಬಿಡುಗಡೆಗೂ ಎಡೆ ಇಲ್ಲದ ಸ್ಥಿತಿಯಲ್ಲಿ ಕನಸುಗಳೆ ಹೆಣ್ಣಿಗೆ ಆಸರೆಯಾಗಿವೆ. ಕೊಪ್ಪಳದ ಕನ್ನಡ ಎಂ.ಎ. ವ್ಯಾಸಂಗ ಮಾಡುತ್ತಿರುವ ಪವನಕುಮಾರ್ ಮಡಿವಂತಿಕೆ ಆಲೋಚನೆ ತೊರೆದು ರಚಿಸಿದ 'ಸೂಳೆಯ ಸ್ವಗತ' ಎಂಬ ಕವನ ವಾಚಿಸುವ ಮೂಲಕ ಜನರ ಚಪ್ಪಾಳೆ ಗಿಟ್ಟಿಸಿದರು. ಶಿವಪ್ರಕಾಶ್ ಕಂಬೂರ್(ನಂರುಶಿ) ಅವರು ಗಜಲ್ ವಾಚಿಸಿದರು. ಹಂಪಿ ವೈಭವ, ಹಂಪಿ ಸ್ಥಳ ಮಹಿಳೆ, ಪ್ರೇಮ, ಸ್ತ್ರೀ ಪರ ಚಿಂತನೆ ರಚಿಸಿದ ಕವನಗಳನ್ನು ಉಳಿದ ಕವಿಗಳು ವಾಚಿಸಿದರು.

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

## ಕವಿ ಮನಸು

### ರಂಗೋಲಿ

ಮುಂಜಾನೆಯ ರಂಗವಲ್ಲಿ
ಚಿತ್ತಾರ ಮೂಡಿಸುವಲ್ಲಿ ನಿರತಳಾದ
ಹುಡುಗಿ ಹಾದಿಯ ಆಕಡೆಗೊಮ್ಮೆ
ಈಕಡೆಗೊಮ್ಮೆ ನೋಡಿಯೇ ನೋಡಿದಳು.
ದೂರದಲ್ಲೆಲ್ಲೋ ರೇಡಿಯೋದ ಹಾಡು.
ಮೌನ ಮುರಿದ ಹುಡುಗಿ
ಗುನುಗುನಿಸಿದಳು ಕನವರಿಸಿದಳು
ಕಲ್ಪನೆಯ ಗರಿಬಿಚ್ಚಿಹಾರಿದಳು.
ಹೀಗೇಕೆ ಮಾಡಿದ ಗೌತಮ?
ಕಲ್ಲುಬಂಡೆ ಯಾಗಿದ್ದೇಕೆ ಅಹಲ್ಯೆ?
ನೆನೆಸಿಕೊಂಡಂತೆಲ್ಲಾ ಚಿತ್ರ
ಕ್ಲಿಷ್ಟ ಅಸ್ಪಷ್ಟ ರೇಖೆಗಳಾಗಿ ಉಳಿದವು.
ಯಾಕೆ ಹೀಗೆ?

– ಎ.ರಾಮಚಂದ್ರ ಶಾಸ್ತ್ರಿ, ಹರಪನಹಳ್ಳಿ.

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ | ಸಂವತ್ಸರ: ಕ್ರೋಧಿ

**03–03–2025 – ಸೋಮವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅಶ್ವಿನಿ |
| ಯೋಗ | : ಬ್ರಹ್ಮ |
| ಕರಣ | : ವಿಷ್ಟಿ |
| ಸೂರ್ಯೋದಯ | : 06:48:01 |
| ಸೂರ್ಯಾಸ್ತ | : 18:29:52 |
| ರಾಹು ಕಾಲ | : 08:16–09:43 |
| ಯಮಘಂಡ ಕಾಲ | : 11:11–12:39 |
| ಗುಳಿಕ ಕಾಲ | : 14:07–15:34 |



## ತುಂಗಭದ್ರಾ ನೀರಿನ ಮಟ್ಟ

ಭಾನುವಾರ : 02–03–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1606.90 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7018 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 31.861 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1586.54 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 886 ಕ್ಯುಸೆಕ್ |
| ಸಾಮರ್ಥ್ಯ | 8.377 ಟಿಎಂಸಿ |










ಹೊಸಪೇಟೆಯ ಸಮಾಜ ಸೇವಕ, ವೀರಶೈವ ಲಿಂಗಾಯತ ಸಮಾಜದ ಮುಖಂಡ, ಗೌರವ ಡಾಕ್ಟರೇಟ್ ಪದವಿ ಪುರಸ್ಕೃತ ಎಂ. ಧರ್ಮನಗೌಡ ಅವರ ಸಮಾಜ ಸೇವೆಯನ್ನು ಪರಿಗಣಿಸಿ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಅನ್ವೇಷಣೆ ಸಾಂಸ್ಕೃತಿಕ ಅಕಾಡೆಮಿ ವತಿಯಿಂದ ರಾಜ್ಯ ಮಟ್ಟದ ಕರುನಾಡ ಸಮಾಜ ಸೇವಾ ರತ್ನ ಪ್ರಶಸ್ತಿಯಳುನ್ನು ಭಾನುವಾರ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ನಾಡಿನ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರು ಗುರುತಿಸಿ ಸನ್ಮಾನಿಸಲಾಯಿತು. ನಿರ್ದೇಶಕ ಎಸ್. ನಾರಾಯಣ ಸೇರಿದಂತೆ ಅಕಾಡೆಮಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ಕೇವಲ ಬರಿ 18 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಕನ್ನಡ

### ಪ್ರಥಮ ಭಾಷೆ ಕನ್ನಡ– ವ್ಯಾಕರಣ : ಅವ್ಯಯಗಳು

**1. ಅವ್ಯಯ ಎಂದರೇನು ?**

**ಉತ್ತರ:–** ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪ ಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು 'ಅವ್ಯಯಗಳು' ಎನ್ನುವರು.

**2. ಅವ್ಯಯಗಳಲ್ಲಿ ಎಷ್ಟು ವಿಧಗಳಿವೆ ? ಅವು ಯಾವುವು ?**

**ಉತ್ತರ:–** ಅವ್ಯಯಗಳಲ್ಲಿ ಆರು ವಿಧಗಳಿವೆ.
1.ಸಾಮಾನ್ಯಾವ್ಯಯ 2.ಅನುಕರಣಾವ್ಯಯ 3.ಭಾವ ಸೂಚಕಾವ್ಯಯ 4.ಸಂಬಂಧಾರ್ಥಕಾವ್ಯಯ 5.ಅವಧಾರಣಾರ್ಥಕಾವ್ಯಯ 6.ಕ್ರಿಯಾರ್ಥಕಾವ್ಯಯ.

**3. ಸಾಮಾನ್ಯಾವ್ಯಯ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ:–** ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳನ್ನು' 'ಸಾಮಾನ್ಯಾವ್ಯಯಗಳು'ಎನ್ನುವರು. ಇವು ಕ್ರಿಯೆಗೆ ವಿಶೇಷಣಗಳಾಗಿರುತ್ತವೆ. **ಉದಾಹರಣೆ–** ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ, ತಟ್ಟನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ, ಚೆನ್ನಾಗಿ ಇತ್ಯಾದಿ.
ಅವಳು ಚೆನ್ನಾಗಿ ಹಾಡಿದಳು. ಅದು ತಟ್ಟನೆ ಬಿತ್ತು.
ನೀನು ನೆಟ್ಟಗೆ ಹೋಗು. ಅವನು ಸುಮ್ಮನೆ ಹೇಳುತ್ತಾನೆ

**4. ಅನುಕರಣಾವ್ಯಯ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ:–** ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ಕೇಳಿದಂತೆಯೇ ಮತ್ತೆ ಅನುಕರಣೆ ಮಾಡಿ ಹೇಳುವ ಪದಗಳನ್ನು ಅನುಕರಣಾವ್ಯಯಗಳು ಎನ್ನುವರು.
ಉದಾಹರಣೆ– ಚಟಚಟ, ಕರಕರ, ಚುರುಚುರು, ಧಗ ಧಗ, ರೊಯ್ಯನೆ, ಸುಯ್ಯನೆ, ದಡ ದಡ ಇತ್ಯಾದಿ.
ನೀರು ದಬ ದಬನೆ ಬಿತ್ತು.
ಮಳೆ ಪಟ ಪಟನೆ ಸುರಿಯಿತು.
ಬೆಂಕಿ ಧಗ ಧಗನೆ ಉರಿಯುತ್ತಿದೆ.

**5. ಭಾವ ಸೂಚಕಾವ್ಯಯ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಕೆಲವು ಅರ್ಥವಿಲ್ಲದ ಪದಗಳನ್ನು ಭಾವ ಸೂಚಕಾವ್ಯಯ ಎನ್ನುವರು. ಉದಾಹರಣೆ– ಆಹಾ ! ಭಳಿರೆ ! ಓಹೋ! ಹೋ ! ಅಃ! ಆಃ ! ಓ! ಇತ್ಯಾದಿ.
ಅಬ್ಬಾ ! ಎಷ್ಟು ಸೊಗಸಾಗಿದೆ.
ಛೆ ! ಹೀಗಾಗಬಾರದಿತ್ತು.
ಥೂ ! ಇದು ಅಸಯ್ಯಕರವಾಗಿದೆ.
ಅಹಹಾ ! ಎಷ್ಟು ಸುಂದರವಾಗಿದೆ.

**6. ಸಂಬಂಧಾರ್ಥ ಕಾವ್ಯಯ ಎಂದರೇನು? ಉದಾಹರಣೆ ಕೊಡಿ.**

**ಉತ್ತರ:–** ಎರಡು ಅಥವಾ ಅದಕ್ಕಿಂತ ಹೆಚ್ಚು ಪದಗಳನ್ನಾಗಲಿ, ವಾಕ್ಯಗಳನ್ನಾಗಲಿ ಜೋಡಿಸುವ ಪದಗಳನ್ನು 'ಸಂಬಂಧಾರ್ಥ ಕಾವ್ಯಯಗಳು' ಎನ್ನುವರು.
ಉದಾಹರಣೆ–ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ ಇತ್ಯಾದಿಗಳು.
ರಾಮನೂ ಲಕ್ಷ್ಮಣನೂ ಸೀತೆಯೂ ಕಾಡಿಗೆ ಹೊರಟರು.
ನೀನೂ ಅವನೂ ಇಬ್ಬರೂ ಹೋಗಿರಿ.
**ಪದ ಸಮುಚ್ಚಯ ಜೋಡಣೆ** >
ಅವನು ಬರುವುದೂ ಬೇಡ ; ಆ ಕೆಲಸ ಆಗುವುದೂ ಬೇಡ.
ಒಂದು ಮೂಟೆ ಅಕ್ಕಿ ಅಥವಾ ಒಂದು ಸಾವಿರ ರೂಪಾಯಿ ಕೊಡು.

**ವಾಕ್ಯಗಳ ಜೋಡಣೆ** >
ಅವನು ಬರಲಿಲ್ಲ ಆದ್ದರಿಂದ ನಾನೂ ಬರಲಿಲ್ಲ.
ಮದುವೆಗೆ ನೀನು ಬರಬೇಕು ಅಲ್ಲದೆ ಒಂದು ಸಾವಿರ ಊಟದ ಎಲೆ ತರಬೇಕು.

**7. ಅವಧಾರಣಾರ್ಥ ಕಾವ್ಯಯ ಎಂದರೇನು ? ಉದಾಹರಣೆ ಕೊಡಿ.**

**ಉತ್ತರ–** ಹಲವು ವಸ್ತುಗಳಲ್ಲಿ ಒಂದು ವಸ್ತುವನ್ನು ನಿಶ್ಚಯಿಸುವ ಸಲುವಾಗಿ ನಿಶ್ಚಯಾರ್ಥದಲ್ಲಿ ಬರುವ ಪದಗಳನ್ನು' ಅವಧಾರಣಾರ್ಥ ಕಾವ್ಯಯ'ಗಳು ಎನ್ನುವರು.
ಉದಾಹರಣೆ– ಅವನೇ, ಅದುವೇ, ಅವಳೇ, ನೀನೇ, ಅವರೇ.
ಅದೇ ನನ್ನ ಪುಸ್ತಕ.
ನಾನೇ ಪುಸ್ತಕ ಕೊಟ್ಟೆ.

**8. ಕ್ರಿಯಾರ್ಥಕಾವ್ಯಯ ಎಂದರೇನು ? ಉದಾಹರಣೆ ಕೊಡಿ.**

ಉತ್ತರ– ಕ್ರಿಯಾ ಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು 'ಕ್ರಿಯಾರ್ಥಕಾವ್ಯಯಗಳು' ಎನ್ನುವರು.
ಉದಾಹರಣೆ– ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.



www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
HAMPI TIMES VIJAYANAGARA
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ಶೋಭಾಯಾತ್ರೆಯಲ್ಲಿ ಜಾನಪದ ಸಿರಿ ಅನಾವರಣ

## ಹಂಪಿ ಉತ್ಸವದ ಮೂರನೆ ದಿನ ಕಲಾ ವೈಭವದ ಶೋಭಯಾತ್ರೆಗೆ ಶಾಸಕ ಎಚ್.ಆರ್.ಗವಿಯಪ್ಪ ಚಾಲನೆ। ಕಲಾತಂಡಗಳೊಂದಿಗೆ ಭುವನೇಶ್ವರಿ ದೇವಿ ಮೆರವಣಿಗೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಂಪಿ ಉತ್ಸವದ ಅಂತಿಮ ದಿನವಾದ ಭಾನುವಾರ ಸಂಜೆ ವಿಜಯನಗರ ಸಾಮ್ರಾಜ್ಯದ ಕಲಾ ವೈಭವ ಮರುಕಳಿಸುವ ಸಾಂಸ್ಕೃತಿಕ ಸೊಬಗಿನ ಜಾನಪದ ಕಲಾ ತಂಡಗಳ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಉದ್ದಾನ ವೀರಭದ್ರೇಶ್ವರ ದೇವಸ್ಥಾನದ ಬಳಿ ವಿಜಯನಗರ ಶಾಸಕ ಹೆಚ್.ಆರ್.ಗವಿಯಪ್ಪ ಭುವನೇಶ್ವರ ದೇವಿಗೆ ಪೂಜೆ ನೆರವೇರಿಸುವುದರ ಮೂಲಕ ಜಾನಪದ ಕಲಾ ತಂಡಗಳ ಮೆರವಣಿಗೆಗೆ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ ಸೇರಿದಂತೆ ಇತರರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

**ಸಾಂಸ್ಕೃತಿಕ ಕಲಾ ಸೊಬಗಿನೊಂದಿಗೆ ತಾಯಿ ಭುವನೇಶ್ವರಿ ದೇವಿಯ ಭವ್ಯ ಮೆರವಣಿಗೆ:**

ಜಾನಪದ ಕಲಾ ತಂಡಗಳ ಮೆರವಣಿಗೆ ನಾಡಿನ ಗ್ರಾಮೀಣ ಭಾಗದ ಸಾಂಸ್ಕೃತಿಕ ವೈವಿಧ್ಯತೆಗೆ ಸಾಕ್ಷಿಯಾಯಿತು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಉತ್ಸವ ಅಂತಿಮ ದಿನದ ಮೆರಗು ಹೆಚ್ಚಿಸಿದವು. ಜಾನಪದ ಕಲಾ ಸೊಬಗಿನೊಂದಿಗೆ ಮುಂದೆ ಹಂಪಿಯ ಗಜ ಲಕ್ಷ್ಮೀ ಸಾಗುತ್ತಿದಂತೆ ಹಿಂದೆ ತಾಯಿ ಭುವನೇಶ್ವರಿ ದೇವಿಯ ಉತ್ಸವದ ಮೂರ್ತಿ ಹೊತ್ತ ಟ್ರಾಕ್ಟರ್ ಸಾಗಿತು. ಮೆರವಣಿಗೆಯ ಉತ್ಸವಕ್ಕೆ ಆಗಮಿಸಿದ್ದ ಜನತೆಯು ಆಕರ್ಷಣೆಗೆ ಕಾರಣವಾಯಿತು. ವಿದೇಶಿ ಪ್ರವಾಸಿಗರು ಸಹ ಜಾನಪದ ಕಲೆಗಳಿಗೆ ಮನಸೋತು ವಿಡಿಯೋ, ಪೋಟೋ ತೆಗೆದುಕೊಂಡು ಸಂಭ್ರಮಿಸಿದರು.



**ಗಮನ ಸೆಳೆದ ಜಾನಪದ ಕಲಾತಂಡಗಳ ಮೆರವಣಿಗೆ:**

ಮೆರವಣಿಗೆಯಲ್ಲಿ ಜಾನಪದ ಕಲಾ ಪ್ರಕಾರಗಳು, ಕಲಾತಂಡಗಳು ನೋಡುಗರ ಗಮನ ಸೆಳೆದವು. ತಾಷಾರಂಡೋಲ್, ಹಲಗೆವಾದನ, ವೀರಗಾಸೆ, ನಾದಸ್ವರ, ಹಗಲುವೇಷ, ಸಿಂಧೋಳ್ ಕುಣಿತ, ನಂದಿಧ್ವಜ, ಕಹಳೆ ವಾದನ, ಮರಗಾಲು ಕುಣಿತ, ಗೊಂಬೆ ಕುಣಿತ, ಹಕ್ಕಿಪಿಕ್ಕಿ ನೃತ್ಯ, ಕರಡಿ ಮೇಳ, ಪುರವಂತಿಕೆ, ಪೂಜಾ ಕುಣಿತ, ಬೊಂಬೆ ನೃತ್ಯ, ಚಿಲಿಪಿಲಿ ಗೊಂಬೆ, ಸಮಾಳವಾದನ, ಮಹಿಳಾ ನಗಾರಿ, ಲಂಬಾಣಿ ವೃತ್ತ, ಮಹಿಳಾ ಪಟಕುಣಿತ, ಕೊಡವ ನೃತ್ಯ, ಕೋಳಿ ನೃತ್ಯ, ನಗಾರಿ, ಕಂಸಾಳೆ, ಚಂಡೆವಾದ್ಯ, ಸೋಮನ ಕುಣಿತ, ಮಹಿಳಾ ಡೊಳ್ಳುಕುಣಿತ, ಯಕ್ಷಗಾನ, ಹುಲಿವೇಷ, ಗಾರುಡಿಗೊಂಬೆ, ಪಾತರಗಿತ್ತಿ ನೃತ್ಯ, ಗೊರವರ ಕುಣಿತ, ಚಿಟ್ಟಿಮೇಳ, ಮಹಿಳೆ ಮತ್ತು ಪುರುಷರ ಕೋಲಾಟ ಸೇರಿದಂತೆ ಹಲವಾರು ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು.

ಭಾನುವಾರ ರಜಾ ದಿನ ಹಾಗೂ ಹಂಪಿ ಉತ್ಸವದ ಕೊನೆಯ ದಿನವಾಗಿದ್ದರಿಂದ ಸಂಜೆ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಕಡೆಗಳಿಂದ ಅಪಾರ ಜನ ಬಂದಿದ್ದರು. ಮೆರವಣಿಗೆ ಹಾದು ಹೋಗುವ ರಸ್ತೆಯುದ್ದಕ್ಕೂ ನಿಂತು ಮೆರವಣಿಗೆ ಕಣ್ಣುಂಬಿಕೊಂಡರು. ಮೂರು ದಿನಗಳ ಉತ್ಸವದ ಅವಧಿಯಲ್ಲಿ ಭಾನುವಾರ ಸಂಭ್ರಮದ ವಾತಾವರಣ ಕಂಡು ಬಂತು.

ಹಂಪಿಯ ಉದ್ದಾನ ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭವಾದ ಜಾನಪದ ಕಲಾತಂಡಗಳ ಮೆರವಣಿಗೆಯು ಹಂಪಿಯ ಬಜಾರ್ ಮೂಲಕ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ವೈಭವದಿಂದ ಸಾಗಿ ಸಂಪನ್ನಗೊಂಡಿತು.









# ಆರೋಗ್ಯ ಅರಿವು ಹೆಚ್ಚಿಸಿಕೊಂಡರೆ ಆಯುಷ್ಯ ವೃದ್ಧಿ

## ಡಿಎಚ್ಒ ಶಂಕರ ನಾಯ್ಕ ಹೇಳಿಕೆ। ಹಂಪಿ ಉತ್ಸವದಲ್ಲಿ ಆರೋಗ್ಯ ಇಲಾಖೆಯಿಂದ ಮಾರಕ ರೋಗಗಳ ಕುರಿತು ಜನಸಾಮಾನ್ಯರಿಗೆ ಜಾಗೃತಿ

## ಡೆಂಗ್ಯು ಮಲೇರಿಯ ನಿಯಂತ್ರಣ, ಮಾನಸಿಕ ಆರೋಗ್ಯ ಹಾಗೂ ಹಾವು ಕಡಿತ ತಡೆಗಟ್ಟುವಿಕೆಗೆ ಸಲಹೆ । 9 ಚಿಕಿತ್ಸಾ ಕೇಂದ್ರಗಳಲ್ಲಿ ಸೇವೆ








■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಸಾಮ್ರಾಜ್ಯದ ಕಲೆ, ಸಂಸ್ಕೃತಿಯನ್ನು ಸಾರ್ವಜನಿಕರಿಗೆ ಉಣಬಿಡಿಸುವ ಮೂರು ದಿನದ ಹಂಪಿ ಉತ್ಸವಕ್ಕೆ ಲಕ್ಷಾಂತರ ಜನರು ನಾಡಿನ ವಿವಿಧೆಡೆಗಳಿಂದ ಹರಿದು ಬರುತ್ತಿರುವ ಜನಸಾಮಾನ್ಯರಿಗೆ ಆರೋಗ್ಯ ಜಾಗೃತಿ ಮೂಡಿಸುವುದು ಅತ್ಯವಶ್ಯವಾಗಿರುವುದರಿಂದ ಹಂಪಿಯ ವಿವಿಧೆಡೆ 9 ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಉಚಿತ ಆರೋಗ್ಯ ಸೇವೆಯ ಜೊತೆ ಮಾರಕ ರೋಗಗಳ ನಿಯಂತ್ರಣಕ್ಕೆ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಜಿಲ್ಲಾ ಆರೋಗ್ಯಧಿಕಾರಿ ಡಾ.ಎಲ್.ಆರ್.ಶಂಕರನಾಯ್ಕ ಅಗತ್ಯ ಕ್ರಮವಹಿಸಿರುವುದು ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಹೌದು., ಬೇಸಿಗೆಯಲ್ಲಿ ಹಂಪಿ ಉತ್ಸವ ನಡೆಯುತ್ತಿದೆ. ಬಿಸಿಲಿನ ತಾಪಮಾನಕ್ಕೆ ನಡೆದು ಸುಸ್ತಾಗುವುದು ಸಹಜ. ಜನಸಾಮಾನ್ಯರ ಜೊತೆ ವಿಐಪಿ, ವಿವಿಐಪಿ ಹಾಗೂ ಕಲಾವಿದರು, ಕಲಾಪ್ರೋತ್ಸಾಹಕರು ಸಂಖ್ಯೆಯೂ ಈ ಬಾರಿ ದ್ವಿಗುಣಗೊಂಡಿದೆ. ಜನರ ಆರೋಗ್ಯ ಕಾಳಜಿಯ ದೃಷ್ಟಿಯಿಂದಾಗಿ ಆರೋಗ್ಯ ಇಲಾಖೆಯು ಹಂಪಿ ಉತ್ಸವದ ಎಂ.ಪಿ.ಪ್ರಕಾಶ್ ಪ್ರಧಾನ ವೇದಿಕೆ ಬಳಿ ಜನಸಾಮಾನ್ಯರಿಗೆ, ವಿಐಪಿ-ವಿವಿಐಪಿ ಹಾಗೂ ಜನಸಾಮಾನ್ಯರಿಗೆ ಪ್ರತ್ಯೇಕ ಚಿಕಿತ್ಸಾಲಯಗಳನ್ನು ತೆರೆಯಲಾಗಿದೆ. ಸಾಸಿವೆಕಾಳು ಗಣಪತಿ, ಶ್ರೀವಿರೂಪಾಕ್ಷೇಶ್ವರ ದೇವಸ್ಥಾನ, ಹಂಪಿ ಸರ್ಕಾರಿ ಶಾಲೆ, ಎದುರು ಬಸವಣ್ಣ, ವಸ್ತುಪ್ರದರ್ಶನ, ಮಹಾನವಮಿ ದಿಬ್ಬ, ಧ್ವನಿ ಮತ್ತು ಬೆಳಕು, ಸಾಹಸ ಕ್ರೀಡೆ, ಗ್ರಾಮೀಣ ಕ್ರೀಡೆ ಹಾಗೂ ಹಂಪಿ ಬೈ ಸ್ಕೈ ಪ್ರದೇಶದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರದು ವೈದ್ಯಾಧಿಕಾರಿಗಳು, ಆರೋಗ್ಯ ಸಿಬ್ಬಂದಿ ಎರಡು ದಿನದಲ್ಲಿ 5000ಕ್ಕೂ ಅಧಿಕ ಜನರಿಗೆ ಚಿಕಿತ್ಸೆ, ಅಸಂಖ್ಯಾತ ಜನರಿಗೆ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣದ ಕುರಿತು ಜಾಗೃತಿ ಮೂಡಿಸಿದರು.

ವಿಜಯನಗರ ಜಿಲ್ಲಾಡಳಿತ, ಜಿಲ್ಲಾಪಂಚಾಯತ್ ಹಾಗೂ ವಿಜಯನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಿ ಇಲಾಖೆ ವಿಶೇಷವಾಗಿ ವಸ್ತುಪ್ರದರ್ಶನದಲ್ಲಿ ಆರೋಗ್ಯ ವಸ್ತುಪ್ರದರ್ಶನ ಮಳಿಗೆಯಲ್ಲಿ ಸುಸ್ಥಿರ ಆರೋಗ್ಯ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು, ಸೊಳ್ಳೆಗಳು ಉತ್ಪತ್ತಿಯಾಗದಂತೆ ತಡೆಯುವ ಕ್ರಮ, ಡೆಂಗ್ಯೂ ಜ್ವರ ಹರಡುವ ಬಗ್ಗೆ ಡೆಂಗ್ಯೂ ಹರಡುವ ಪ್ರದೇಶ ಮತ್ತು ಡೆಂಗ್ಯೂ ಹರಡದಿರುವ ಪ್ರದೇಶಗಳ ವಿಧಗಳ ಬಗ್ಗೆ ಹಾಗೂ ಸೊಳ್ಳೆಯ ಜೀವನ ಚಕ್ರದ ಬಗ್ಗೆ ಜನರಿಗೆ ವಸ್ತು ಪ್ರದರ್ಶನದ ಮೂಲಕ ಮಾಹಿತಿ ನೀಡಿ ಜಾಗೃತಿ ಮೂಡಿಸಿದರು.

**ಮನೆಗಳಲ್ಲಿ ಈ ರೀತಿ ಮಾಡಬೇಡಿ :-** 1. ನೀರು ತುಂಬುವ ಬ್ಯಾರೆಲ್ ಡ್ರಮ್ ಹಾಗೂ ಇನ್ನಿತರ ಪರಿಕರಗಳನ್ನು ಮುಚ್ಚಳ ಮುಚ್ಚದೆ ಇಡಬೇಡಿ, 2. ಮಳೆ ನೀರು ನಿಲ್ಲುವ ರೀತಿಯಲ್ಲಿ ಎಳನೀರಿನ ಚಿಪ್ಪುಗಳನ್ನು ಬಿಸಾಡಬೇಡಿ, 3. ಮಳೆ ನೀರು ನಿಲ್ಲುವ ರೀತಿಯಲ್ಲಿ ಟೈಯರುಗಳನ್ನು ಬಿಸಾಡಬೇಡಿ, 4. ಹೂವಿನ ಕುಂಡಲಗಲ್ಲಿ ನೀರು ನಿಲ್ಲುವಂತೆ ಮಾಡಬೇಡಿ, 5. ಸೊಳ್ಳೆ ಪರದೆ ಹಾಕಿಕೊಳ್ಳದೆ ಮಲಗಬೇಡಿ,

**ಮನೆಯ ಸುತ್ತಮುತ್ತ ಹೀಗೆ ಮಾಡಿ :-** 1. ನೀರು ತುಂಬಿದ ಬ್ಯಾರಲ್ ಡ್ರಮ್ ಹಾಗೂ ಇನ್ನಿತರ ಪರಿಕರಗಳನ್ನು ಮುಚ್ಚಳ ಮುಚ್ಚಿ ಇಡಬೇಕು, 2. ಹೂವಿನ ಕುಂಡಲಗಳಲ್ಲಿ ನೀರು ನಿಲ್ಲದಂತೆ ಗಮನಹರಿಸಬೇಕು 3. ಮಳೆ ನೀರು ನಿಲ್ಲದ ರೀತಿಯಲ್ಲಿ ಟೈಯರ್‌ಗಳನ್ನು ಜೋಡಿಸಿ ಹೊದಿಕೆ ಹಾಕಿ, 4. ಮಳೆ ನೀರು ನಿಲ್ಲದಂತೆ ಎಳೆನೀರಿನ ಚಿಪ್ಪುಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಿ, 5. ಸೊಳ್ಳೆ ಪರದೆ ಹಾಕಿಕೊಂಡು ಮಲಗಬೇಕು ಎಂದು ಸಾರ್ವಜನಿಕರಿಗೆ ತಿಳಿಸಿದರು.



**ಆರೋಗ್ಯ ವಸ್ತುಪ್ರದರ್ಶನ:** ಆರೋಗ್ಯ ಮೇಳದಲ್ಲಿ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ಹಾಗೂ ಮಾನಸಿಕ ಆರೋಗ್ಯ ವಿಭಾಗವು ಸಹ ಆರೋಗ್ಯ ಮೇಳದಲ್ಲಿ ಭಾಗಿಯಾಗಿದ್ದು ಹಲವಾರು ಕ್ರಿಯಾತ್ಮಕ ಮತ್ತು ಸೃಜನಶೀಲ ವಿಶೇಷ ಆಕೃತಿಗಳ ಮೂಲಕ ಜನಸಾಮಾನ್ಯರಿಗೆ ಮೆದುಳು ಆರೋಗ್ಯದ ಕುರಿತಾಗಿ ಜನಸಾಮಾನ್ಯರಿಗೆ ಅರಿವು ಹೆಚ್ಚಿಸಲು ಮೆದುಳು ಆಕೃತಿಯನ್ನು ಪ್ರದರ್ಶಿಸಿದರು.

**ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ – IEC (ಮಾಹಿತಿ, ಶಿಕ್ಷಣ ಮತ್ತು ಸಂವಹನ):** ಗ್ರಾಮೀಣ ಪ್ರದೇಶಗಳಲ್ಲಿ ಕೂಲಿ ಕಾರ್ಮಿಕರು ಕೃಷಿ ಚಟುವಟಿಕೆಗಳು ಸೇರಿದಂತೆ ನಾನಾ ಕಾರ್ಯಗಳಲ್ಲಿ ತೊಡಗಿದಾಗ ಆಕಸ್ಮಿಕವಾಗಿ ಹಾವು ಕಡಿತಕ್ಕೊಳಗಾದವರು ಭಯಪಡೆದೆ ಮುಂಜಾಗ್ರತವಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿಸಿದರು.

**ಹಾವು ಉಪಟಳ ತಡೆಗಟ್ಟುವಿಕೆಗೆ ಪ್ರಮುಖ ಅಂಶಗಳು:** 1) ಹಾವುಗಳಿರುವ ಪ್ರದೇಶಗಳಲ್ಲಿ ಬರಿಗಾಲಿನಲ್ಲಿ ನಡೆಯುವುದನ್ನು ತಪ್ಪಿಸಿ. ಗದ್ದೆಗಳು ಅಥವಾ ಕಾಡುಗಳಲ್ಲಿ ಬೂಟುಗಳು ಮತ್ತು ಉದ್ದ ಪ್ಯಾಂಟ್‌ಗಳನ್ನು ಧರಿಸಿ. 2) ಹಾವುಗಳನ್ನು ತಡೆಯಲು ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛವಾಗಿ ಮತ್ತು ದಂಶಕಗಳಿಂದ ಮುಕ್ತವಾಗಿಡಿ. 3) ರಾತ್ರಿಯಲ್ಲಿ ನಡೆಯುವಾಗ ಟಾರ್ಚ್ ಬಳಸಿ. 4) ಹಾವುಗಳನ್ನು ಮುಟ್ಟುವುದನ್ನು ಅಥವಾ ಪ್ರಚೋದಿಸುವುದನ್ನು ತಪ್ಪಿಸಿ

**ಹಾವು ಕಡಿತಕ್ಕೆ ಪ್ರಥಮ ಚಿಕಿತ್ಸೆ:** 1) ಶಾಂತವಾಗಿರಿ ಮತ್ತು ಬಲಿಪಶುವಿಗೆ ಧೈರ್ಯ ತುಂಬಿ., 2) ಪೀಡಿತ ಅಂಗವನ್ನು ಸ್ಪ್ಲಿಂಟ್ನೊಂದಿಗೆ ನಿಶ್ಚಲಗೊಳಿಸಿ. 3) ಟೂರ್ನಿಕೆಟ್ ಅನ್ನು ಕತ್ತರಿಸಬೇಡಿ, ಹೀರಬೇಡಿ ಅಥವಾ ಅನ್ವಯಿಸಬೇಡಿ. 4) ರಾಸಾಯನಿಕಗಳು, ಐಸ್ ಅಥವಾ ಸಾಂಪ್ರದಾಯಿಕ ಪರಿಹಾರಗಳನ್ನು ಅನ್ವಯಿಸಬೇಡಿ. 5) ಹತ್ತಿರದ ಆಸ್ಪತ್ರೆಯಲ್ಲಿ ತಕ್ಷಣದ ವೈದ್ಯಕೀಯ ಆರೈಕೆಯನ್ನು ಪಡೆಯಿರಿ.

**ತುರ್ತು ಪ್ರತಿಕ್ರಿಯೆ:** * ಅನಗತ್ಯ ಚಲನೆಯಿಲ್ಲದೆ ಬಲಿಪಶುವನ್ನು ಸಾಗಿಸಿ. * ಹಾವನ್ನು ಗುರುತಿಸಿ (ಸುರಕ್ಷಿತವಾಗಿದ್ದರೆ), ಆದರೆ ಅದನ್ನು ಹಿಡಿಯಲು ಪ್ರಯತ್ನಿಸಬೇಡಿ. * ವಿಷ-ವಿರೋಧಿ ಚಿಕಿತ್ಸೆಗಾಗಿ ಆರೋಗ್ಯ ಅಧಿಕಾರಿಗಳಿಗೆ ವರದಿ ಮಾಡಬೇಕು. ಈ ರೀತಿಯ ಮುಂಜಾಗ್ರತ ಕ್ರಮಗಳನ್ನು ಪಾಲಿಸುವುದರಿಂದ ಹಾವು ಕಡಿತಕ್ಕೆ ಸಂಬಂಧಿಸಿದ ಸಾವುಗಳು ಮತ್ತು ಅಂಗವೈಕಲ್ಯಗಳು ಕಡಿಮೆ ಮಾಡಬಹುದು ಎಂದು ವೈದ್ಯರು ತಿಳಿಸಿದರು.



ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಹಂಪಿ ಉತ್ಸವದಲ್ಲಿ ಆರೋಗ್ಯ ಇಲಾಖೆಯ ಚಿಕಿತ್ಸಾ ಸೌಲಭ್ಯಗಳು ಮತ್ತು ಆರೋಗ್ಯ ಜಾಗೃತಿ ಮೂಡಿಸಲಾಗಿದೆ. 9 ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳು, 3 ಸಂಚಾರಿ ಘಟಕ, 13 ಅಂಬ್ಯುಲೆನ್ಸ್ ಹಾಗೂ 300 ಕ್ಕೂ ಅಧಿಕ ಆರೋಗ್ಯ ಸಿಬ್ಬಂದಿಗಳನ್ನು ನಿಯೋಜಿಸಿ, ಮೊದಲೆರಡು ದಿನದಲ್ಲಿ 5000ಕ್ಕೂ ಅಧಿಕ ಜನರಿಗೆ ಚಿಕಿತ್ಸೆ ನೀಡಲಾಗಿದೆ. ಆರೋಗ್ಯ ಸೇವೆಗೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಜನರ ಆರೋಗ್ಯ ರಕ್ಷಣೆಯೇ ನಮ್ಮ ಆದ್ಯತೆಯಾಗಿದೆ.

– ಡಾ.ಎಲ್.ಆರ್.ಶಂಕರ್‌ನಾಯ್ಕ
ಜಿಲ್ಲಾ ಆರೋಗ್ಯಾಧಿಕಾರಿಗಳು, ವಿಜಯನಗರ



ಯುವಿನ್‌ನಲ್ಲಿ ನೋಂದಣಿ ಮಾಡಿ ಲಸಿಕೆ ಪಡೆದ ಫಲಾನುಭವಿಗಳು ಲಸಿಕೆ ಪಡೆದ ಪ್ರಮಾಣ ಪತ್ರವನ್ನು ತಾವೇ ಆನ್ಲೈನ್ ಮೂಲಕ ಪಡೆದುಕೊಳ್ಳಬಹುದು. ದಡರಾ, ಮತ್ತು ರೂಬಿಲ್ಲಾ ಕೊನೆಗಾಣಿಸಲು ಸಹಕಾರಿಯಾಗಿದೆ. ಲಸಿಕೆ ಪಡೆಯದ ಮಗುವಿನ ಪತ್ತೆಗೆ ಯುವಿನ್ ಅತ್ಯುಪಯುಕ್ತವಾಗಿದೆ.

– ಡಾ.ಬಿ.ಜಂಬಯ್ಯ ಜಿಲ್ಲಾ ಆರ್.ಸಿ.ಎಚ್. ಧಿಕಾರಿಗಳು

ಮಾನಸಿಕ ಮತ್ತು ಮೆದುಳು ಆರೋಗ್ಯ ಸಮಸ್ಯೆಗಳನ್ನು ನಿವಾರಿಸುವ ಕುರಿತು ಜನಸಾಮಾನ್ಯರಿಗೆ ರೋಗ ನಿಯಂತ್ರಣ ಕ್ರಮಗಳ ಕುರಿತು ಜನರಿಗೆ ಮಾಹಿತಿ ತಿಳಿಸಲಾಗಿದೆ.ಆರೋಗ್ಯ ಮಾಹಿತಿ ನೀಡಲು ಹಂಪಿ ಉತ್ಸವ ಸಹಕಾರಿಯಾಗಿದೆ.

– ಡಾ. ರಾಧಿಕಾ, ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿಗಳು

ರೋಗವಾಹಕ ಆಶ್ರಿತ ರೋಗಗಳ ಬಗ್ಗೆ ಮತ್ತು ಸೊಳ್ಳೆಗಳ ನಿಯಂತ್ರಣ, ಡೆಂಗ್ಯೂ ಮಲೇರಿಯಾ ಚಿಕನ್‌ಗುನ್ಯ ಮತ್ತು ಜೆ.ಇ ಆರೋಗ್ಯ ಸಮಸ್ಯೆಗಳನ್ನು ನಿವಾರಿಸುವ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

– ಡಾ.ಸತೀಶ್ ಚಂದ್ರ, ಕಾರ್ಯಕ್ರಮ ಅಧಿಕಾರಿಗಳು